ದಿನಾಂಕ 09-12-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಗೆಂದು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ.

ಭೂ ಸ್ವಾಧೀನ ಕಾಯಿದೆ ಕಲಂ. 4(1) ರನ್ವಯ ಕೊಟ್ಟಿರುವ ನೋಟೀಸ್ ನ ಪ್ರತಿಯನ್ನು ನಿಪಿ-1 ಎಂದು, ಭೂ ಸ್ವಾಧೀನ ಕಾಯಿದೆ ಕಲಂ. 9 ಮತ್ತು 10 ರನ್ವಯ ಕೊಟ್ಟಿರುವ ನೋಟೀಸ್ ನ ಪ್ರತಿಯನ್ನು ನಿಪಿ-2 ಎಂದು, ಜಂಟಿ ಅಳತೆ ತಃಖ್ತೆಯ ಪ್ರತಿಯನ್ನು ನಿಪಿ-3 ಎಂದು, ಅವಾರ್ಡ್ ತಃಖ್ತೆಯ ಪ್ರತಿಯನ್ನು ನಿಪಿ-4 ಎಂದು, ಭೂಸ್ವಾಧೀನಾಧಿಕಾರಿಯವರ ನಡವಳಿಯನ್ನು ನಿಪಿ-5 ಎಂದು, ಅವಾರ್ಡ್ ನೋಟೀಸ್‌ನ ಪ್ರತಿಯನ್ನು ನಿಪಿ-6 ಎಂದು, ಜಿಲ್ಲಾಧಿಕಾರಿಯವರ ಜ್ಞಾಪನವನ್ನು ನಿಪಿ-7 ಎಂದು, ಮತ್ತೊಂದು ಅವಾರ್ಡ್ ನೋಟೀಸ್‌ನ ಪ್ರತಿಯನ್ನು ನಿಪಿ-8 ಎಂದು, ಭೂ ಪರಿಹಾರದ ಹಣ ಸಂದಾಯದ ರಶೀತಿಯ ಪ್ರತಿಯನ್ನು ನಿಪಿ-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಜಿಲ್ಲಾ ಸರ್ಕಾರಿ ವಕೀಲರಿಂದಃ-**

ಸ.ನಂ. 133/5 ರಲ್ಲಿ 1 ಎಕರೆ 38 ಗುಂಟೆ ಜಮೀನು ಇದೆ. ಅದರಲ್ಲಿ 15 ಗುಂಟೆ ಜಮೀನು ಸ್ವಾಧೀನಪಡಿಸಿಕೊಂಡಿದ್ದಾರೆ. ಅದು ಖುಷ್ಕಿ ಜಮೀನು. ಹಲಸಿನ ಮರ, ತೆಂಗಿನ ಮರ, ಮಾವಿನ ಮರಗಳು ಇರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ತೋಟದಿಂದ ವರ್ಷಕ್ಕೆ 3 ಲಕ್ಷ ಆದಾಯ ಬರುತ್ತಿತ್ತು ಎಂದು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ತುಮಕೂರಿನಿಂದ 10 ಕಿ ಮೀ ದೂರ ಇದೆ. ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ 1 ಗುಂಟೆ ರೂ. 1,60,000/-

ಬಾಳುತ್ತಿತ್ತು ಎಂದು ತೋರಿಸುವ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಏನು ಮೌಲ್ಯ ಇತ್ತೋ ಅದರಂತೆ ಪರಿಹಾರವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನೀಡಿರುವ ಪರಿಹಾರ ಸರಿಯಾಗಿದೆ ಎಂದರೆ ಸರಿಯಲ್ಲ. ರೈಲ್ವೇ ಲೈನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಹಾಕಿದ್ದಾರೆ ಎಂದರೆ ಸರಿ. ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ</u>**

ರೈಲ್ವೇ ಲೈನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಹಾಕಿದ್ದಾರೆ ಎಂದರೆ ಸರಿ. ನೀಡಿರುವ ಪರಿಹಾರ ಸರಿಯಾಗಿದೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸಾ ಸ ಇ ಎ ಒ

**1 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,**
**ತುಮಕೂರು.**